

# ರ್‍ಯಾಂಪ್‌ನಲ್ಲಿ ಮಿಂಚುವ ಪುರುಷರು

**ಪುರುಷರು ಆ್ಯಂಕಲ್ ಲೆಂತ್ ಪ್ಯಾಂಟ್ ಧರಿಸಿ ರ್‍ಯಾಂಪ್ ಮೇಲೆ ಕ್ಯಾಟ್‌ವಾಕ್ ಮಾಡಿ ಮಿಂಚಿದ ಬೆನ್ನಲ್ಲೇ ಈ ಪ್ಯಾಂಟ್ ಅತ್ಯಂತ ಜನಪ್ರಿಯವಾಗಿ ಫ್ಯಾಷನ್ ಟ್ರೆಂಡ್ ಆಗಿಯೂ ಮಾರ್ಪಟ್ಟಿದೆ.**

**■ ಯು.ಅನಂತ್**

ಜಗತ್ತಿನಲ್ಲಿ ಅತ್ಯಂತ ಗ್ಲಾಮರಸ್ ಕ್ಷೇತ್ರ ಎಂಬುದಿದ್ದರೆ ಅದು ಎರಡು. ಒಂದು ಮಾಡೆಲಿಂಗ್ ಮತ್ತೊಂದು ಫ್ಯಾಷನ್. ಎರಡು ಕ್ಷೇತ್ರಗಳೂ ಒಂದಕ್ಕೊಂದು ಪೂರಕವಾಗಿ ಅವಿನಾಭಾವ ಸಂಬಂಧ ಹೊಂದಿವೆ. ಫ್ಯಾಷನ್ ಪ್ರಪಂಚ ಮಾತ್ರ ನಿಂತ ನೀರಲ್ಲ. ಅದು ನಿರಂತರ ಬದಲಾವಣೆಯ, ಸದಾ ಹೊಸತನವನ್ನೇ ಬಯಸುವ ವಿಶಿಷ್ಟ ಕ್ಷೇತ್ರ. ಹಾಗೆಂದು ಫ್ಯಾಷನ್ ಜಗತ್ತು ಮಹಿಳೆಯರಿಗೆ ಮಾತ್ರ ಸೀಮಿತ ಎಂದುಕೊಂಡರೆ ಅದು ನಿಮ್ಮ ಎಣಿಕೆ ತಪ್ಪು. ಇಂದು ಫ್ಯಾಷನ್ ಎಂಬುದು ಪುರುಷರಿಗೂ ಬೇಕು, ಫ್ಯಾಷನ್‌ನಲ್ಲಿ ಪುರುಷರೂ ಅಷ್ಟೇ ಪಾಲುದಾರರು.

ಫ್ಯಾಷನ್ ಶೋ ಕೂಡ ಅಷ್ಟೆ. ಮಹಿಳೆಯರಷ್ಟೇ ಪುರುಷರೂ ಪಾಲ್ಗೊಳ್ಳುತ್ತಾರೆ. ಮಹಾ ನಗರಗಳಲ್ಲಿ ಆಗಾಗ ನಡೆಯುವ ಫ್ಯಾಷನ್ ಶೋಗಳಲ್ಲಿ ಪುರುಷರದ್ದೇ ಪಾರುಪತ್ಯವಿರುತ್ತದೆ. ಈಚೆಗೆ ಬೆಂಗಳೂರಿನಲ್ಲಿ ನಡೆದ ಲ್ಯಾಕ್ಮೆ ಫ್ಯಾಷನ್ ಶೋ ಇದಕ್ಕೆ ತಾಜಾ ಉದಾಹರಣೆ. ಇಲ್ಲಿ ಮಾಡೆಲಿಂಗ್ ಕ್ಷೇತ್ರದ ಯುವಕರು ಫ್ಯಾಷನೆಬಲ್ ಉಡುಪುಗಳನ್ನು ತೊಟ್ಟು ರ್‍ಯಾಂಪ್ ಮೇಲೆ ಕ್ಯಾಟ್‌ವಾಕ್ ಮಾಡಿದರು. ವೈವಿಧ್ಯಮಯ ಜಾಕೆಟ್‌ಗಳನ್ನು, ಪ್ಯಾಂಟ್, ಪೈಜಾಮಗಳನ್ನು ತೊಟ್ಟು ಫ್ಯಾಷನ್ ಮೆರೆದದ್ದು ನೋಡುಗರ ಕಣ್ಣುಗಳನ್ನು ಸೆಳೆಯುವಲ್ಲಿ ಯಶಸ್ವಿಯಾಯಿತು. ಜತೆಗೆ ಪುರುಷರೂ ಫ್ಯಾಷನ್ ಪ್ರಪಂಚದಲ್ಲಿ ಮಿಂಚಬಲ್ಲರು ಎಂಬುದನ್ನು ಸಾಬೀತುಪಡಿಸಿದ್ದು, ಯುವಕರನ್ನು ಕಣ್ಣರಳಿಸಿ ನೋಡುವಂತೆ ಮಾಡಿತು.

ಫ್ಯಾಷನ್ ಶೋದಲ್ಲಿ ಪುರುಷರ ಆ್ಯಂಕಲ್ ಲೆಂತ್ ಪ್ಯಾಂಟ್ ಹೆಚ್ಚು ಗಮನಸೆಳೆದಿದ್ದಲ್ಲದೆ ಜನಪ್ರಿಯವೂ ಆಯಿತು. ಈ ಮಟ್ಟಿಗೆ 'ಪುರುಷರಿಗೆ ಫ್ಯಾಷನ್ ಆಯ್ಕೆ ಹೆಚ್ಚು ಇಲ್ಲ' ಎಂಬ ಹಳೆಯ ಮಾತು ತೆರೆಗೆ

